**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ**

ಉನ್ನತ ಶಿಕ್ಷಣ ಇಲಾಖೆಯಲ್ಲಿ ಅನುದಾನಿತ ಪದವಿ ಕಾಲೇಜುಗಳಲ್ಲಿ ನಿವೃತ್ತರಾದಂತಹ ಅಧ್ಯಾಪಕರುಗಳಿಗೆ ಅವರ ಮೇಲೆ ಇಲಾಖಾ ವಿಚಾರಣೆ ಕಾರಣ ನೀಡಿ ಅವರಿಗೆ ನಿವೃತ್ತರಾಗಿದ್ದರು ನಿವೃತ್ತಿ ನಂತರ ಬರಬೇಕಾಗಿ ಸೌಲಭ್ಯಗಳನ್ನು ನೀಡದೆ ವಿನಾ ಕಾರಣ ವಿಳಂಬ ಮಾಡಲಾಗುತ್ತಿದೆ. ಸದರಿ ಅಧ್ಯಾಪರುಗಳು ಕೋರ್ಟ್‌ನಿಂದ ಆದೇಶ ಮಾಡಿಸಿಕೊಂಡು ಬಂದಿದ್ದರು ಸಹ ಅವರಿಗೆ ಇಲಾಖಾ ಕಾನೂನು ಕೋಶದಿಂದ ಮೇಲ್ಮನವಿಗೆ ಅರ್ಹತಾ ಪ್ರಕರಣವಲ್ಲ ಎಂದು ಅಭಿಪ್ರಾಯ ನೀಡಿದ್ದರು ಸಹ ಉನ್ನತ ಶಿಕ್ಷಣ ಇಲಾಖೆಯವರು ವಿನಾ ಕಾರಣ ತೊಂದರೆ ಕೊಡುವ ಉದ್ದೇಶದಿಂದ ಕೋರ್ಟ್ ಗೆ ಮೇಲ್ಮನವಿ ಸಲ್ಲಿಸಿ ಇವರುಗಳಿಗೆ ಸೇವಾ ನಿವೃತ್ತಿಯ ನಂತರ ತೊಂದರೆ ಕೊಡುತ್ತಿದ್ದಾರೆ. ಉದಾಹರಣೆಗೆ ಹೆಚ್. ಹೊನ್ನಪ್ಪ ವಾಣಿಜ್ಯಶಾಸ್ತ್ರ ಸಹ ಪ್ರಾಧ್ಯಾಪಕರು (ನಿವೃತ್ತ), ವಿಶ್ವೇಶ್ವರಪುರ ವಾಣಿಜ್ಯ ಕಾಲೇಜು, ಕೆ.ಆರ್. ರಸ್ತೆ, ಬೆಂಗಳೂರು ಇವರಿಗೆ ಉಚ್ಚನ್ಯಾಯಾಲಯದ ಆದೇಶ ಮತ್ತು ಕಾನೂನು ಕೋಶದ ಅಭಿಪ್ರಾಯವನ್ನು ಕಡೆಗಣಿಸಿ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿಯು ವಜಾಗೊಂಡಿದ್ದರು ಸಹ ನಿವೃತ್ತಿ ಸೌಲಭ್ಯಗಳನ್ನು ನೀಡದೆ ತುಂಬಾ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ, ಅನುದಾನಿತ ಕಾಲೇಜುಗಳಲ್ಲಿ ನಿವೃತ್ತರಾಗಿರುವ ಅಧ್ಯಾಪಕರುಗಳಿಗೆ ನಿವೃತ್ತಿ ಸೌಲಭ್ಯಗಳನ್ನು ನೀಡದೆ ವಿನಾ ಕಾರಣ ತೊಂದರೆ ಕೊಡುತ್ತಿರುವ ವಿಷಯವನ್ನು ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ವಯೋನಿವೃತ್ತಿ ಹೊಂದಿರುವ ಬೋಧಕರುಗಳಿಗೆ ತ್ರಿವಿಧ ಸೌಲಭ್ಯ ಯೋಜನೆ (TBS) ನಿಯಮಗಳ ಅಡಿಯಲ್ಲಿ ಪಿಂಚಣಿಯನ್ನು ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದೆ.

ಖಾಸಗಿ ಅನುದಾನಿತ ಕಾಲೇಜುಗಳ ಆಡಳಿತ ಮಂಡಳಿಯು ನೇಮಕಾತಿ ಶಿಸ್ತು ಪ್ರಾಧಿಕಾರವಾಗಿದ್ದು, ಖಾಸಗಿ ಅನುದಾನಿತ ಅಧ್ಯಾಪಕರ ವಿರುದ್ಧ ದುರ್ನಡತೆ, ದೂರು, ಅನಧಿಕೃತ ಗೈರುಹಾಜರಿ ಇಂತಹ ಪ್ರಕರಣಗಳು ದಾಖಲಾದಂತಹ ಸಂದರ್ಭದಲ್ಲಿ ಆಡಳಿತ ಮಂಡಳಿಯು ಶಿಸ್ತಿನ ನಡವಳಿಗಳನ್ನು ನಡೆಸಲು ಉದ್ದೇಶಿಸಿದ್ದಲ್ಲಿ ಸದರಿ ನಡವಳಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003 ರ ನಿಯಮ 37 ರಲ್ಲಿ ತಿಳಿಸಿರುವಂತೆ ಕ್ರಮವಹಿಸಬೇಕಾಗಿರುತ್ತದೆ.

ಮೇಲಿನಂತೆ ವಿಚಾರಣೆಗೊಳಪಟ್ಟ ಸಿಬ್ಬಂದಿಗಳು ವಯೋ ನಿವೃತ್ತಿ ವಯಸ್ಸನ್ನು ಪೂರೈಸಿದ್ದಲ್ಲಿ, ಅವರಿಗೆ ಪಿಂಚಣಿ ಸೌಲಭ್ಯಗಳನ್ನು ಇತ್ಯರ್ಥಪಡಿಸುವ ಸಂಬಂಧ ತ್ರಿವಿಧ ಸೌಲಭ್ಯ ಯೋಜನೆಯ (TBS) ನಿಯಮ "9. In respect of matters not specifically covered in these rules the corresponding procedure laid down in the Karnataka Civil Service Rules shall apply Mutatis Mutandis" ರನ್ವಯ KCSR ನಿಯಮಗಳನ್ನು ಅಳವಡಿಸಿಕೊಳ್ಳಲು ತಿಳಿಸಲಾಗಿರುವ ಕಾರಣ ಅದರಂತೆ KCSR ನಿಯಮ 214(1) (A) ರನ್ವಯ ತಾತ್ಕಾಲಿಕ ಪಿಂಚಣಿಗಾಗಿ ಆಡಳಿತ ಮಂಡಳಿಗಳು ಸಂಬಂಧಪಟ್ಟ ಜಂಟಿ ನಿರ್ದೇಶಕರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.

ಆಡಳಿತ ಮಂಡಳಿಯ ಪ್ರಸ್ತಾವನೆ ಹಾಗೂ ಜಂಟಿ ನಿರ್ದೇಶಕರ ಪತ್ರವನ್ನು ಪರಿಶೀಲಿಸಿಕೊಂಡು ಸದರಿ ಅಧ್ಯಾಪಕರಿಗೆ ತಾತ್ಕಾಲಿಕ ಪಿಂಚಣಿ (Provisional Pension) ಮಂಜೂರಾತಿಗಾಗಿ ಮಹಾಲೇಖಪಾಲರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತದೆ.

ಒಂದು ವೇಳೆ, ವಿಚಾರಣೆಗೊಳಪಟ್ಟ ಸಿಬ್ಬಂದಿಗಳು ಆಡಳಿತ ಮಂಡಳಿಯ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನನ್ವಯ ಪಿಂಚಣಿಗೆ ಪರಿಗಣಿಸುವ ಅಂಶಗಳ ಬಗ್ಗೆ ಪರಿಶೀಲಿಸಿಕೊಂಡು ವಿಳಂಬವಿಲ್ಲದಂತೆ ಪಿಂಚಣಿ ಹಾಗೂ ಇತರೆ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಲು ಮಹಾಲೇಖಪಾಲರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು ಇಲ್ಲಿ ಸ್ವಾಪ್‌ಗ್ಯಾಪ್ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಚ್ ಹೊನ್ನಪ್ಪ ಇವರನ್ನು ದಿನಾಂಕ:10-04-2006 ರಂದು ಸೇವಾ ಸಕ್ರಮಾತಿಗೊಳಿಸಿ ಆದೇಶಿಸಲಾಗಿರುತ್ತದೆ.

ಸದರಿಯವರ ಸಕ್ರಮಾತಿ ಕುರಿತಂತೆ ಶ್ರೀ ರಾಮಸ್ವಾಮಿ ಇವರು ಕರ್ನಾಟಕ ಶಿಕ್ಷಣ ಕಾಯ್ದೆಯ ಸೆಕ್ಷನ್ 131ರಡಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ರಿವಿಷನ್ ಅರ್ಜಿ ಸಂಖ್ಯೆ:07/2017 ಅನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ದಿನಾಂಕ:14.06.2019 ರಂದು ಹೊರಡಿಸಿದ ಆದೇಶದಲ್ಲಿ ಶ್ರೀ ಹೆಚ್ ಹೊನ್ನಪ್ಪ ಇವರ ಸೇವೆಯನ್ನು ಸಕ್ರಮಾತಿಗೊಳಿಸಲಾಗಿರುವ ದಿನಾಂಕ:10.04.2006ರ ಪತ್ರವನ್ನು ಹಿಂಪಡೆಯಲಾಗಿರುತ್ತದೆ. ಸದರಿ ಆದೇಶದಿಂದ ಬಾಧಿತರಾದ ಶ್ರೀ ಹೆಚ್ ಹೊನ್ನಪ್ಪ ಇವರು ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ:27620/2019ರನ್ನು ದಾಖಲಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ:09.06.2023 ರಂದು ನೀಡಿದ ತೀರ್ಪಿನಲ್ಲಿ ಅರ್ಜಿದಾರರ ಮನವಿಯನ್ನು ಭಾಗಶಃ ಪುರಸ್ಕರಿಸಿ ಕರ್ನಾಟಕ ಶಿಕ್ಷಣ ಕಾಯ್ದೆಯ ಸೆಕ್ಷನ್ 131ರಡಿಯಲ್ಲಿ ದಾಖಲಿಸಿದ್ದ ರಿವಿಷನ್ ಅರ್ಜಿ ಸಂಖ್ಯೆ:07/2017 ರಲ್ಲಿ ದಿನಾಂಕ:14.06.2019 ರಂದು ಹೊರಡಿಸಿದ ಆದೇಶವನ್ನು ತಳ್ಳಿಹಾಕಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ವಕೀಲರ ದಿನಾಂಕ:07.07.2023 ರ ಪತ್ರದಲ್ಲಿ ದಿನಾಂಕ:09-06-2023 ರ ತೀರ್ಪಿನ ವಿರುದ್ಧ **ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣ**ವೆಂದು ಅಭಿಪ್ರಾಯಿಸಿರುತ್ತಾರೆ. ಈ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಕೋರಲಾಗಿ, ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಲ್ಲವೆಂದು ಅಭಿಪ್ರಾಯಿಸಿರುತ್ತಾರೆ.

ತತ್ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿವಾದ ಪರಿಹಾರ ಮಂಡಳಿಯಲ್ಲಿ ಚರ್ಚಿಸಿ, ದಿನಾಂಕ:09-06-2023 ರ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಲಾಗಿದ್ದು, ಅದರಂತೆ, ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರಿ ಆದೇಶ ಸಂಖ್ಯೆ:ED 02 UPC 2024 Dated:04.07.2024 ಅನ್ನು ಹೊರಡಿಸಲಾಗಿದ್ದು, ದಿನಾಂಕ:25.11.2024 ರಂದು ರಿಟ್ ಅಪೀಲು ಸಂಖ್ಯೆ:1790/2024ರನ್ನು ದಾಖಲಾಗಿರುತ್ತದೆ. ಸದರಿ ರಿಟ್ ಅಪೀಲು ಸಂಖ್ಯೆ:1790/2024ರ ಪ್ರಕರಣವು ದಿನಾಂಕ:20.11.2025 ರಂದು ವಿಚಾರಣೆಗೆ ಬಂದಾಗ ರಿಟ್ ಅಪೀಲನ್ನು ಮಾನ್ಯ ನ್ಯಾಯಾಲಯವು ವಜಾಗೊಳಿಸಲಾಗಿದೆ ಎಂಬ ಮಾಹಿತಿಯು ರಾಜ್ಯ ಉಚ್ಚ ನ್ಯಾಯಾಲಯದ website ನಿಂದ ತಿಳಿದು ಬಂದಿರುತ್ತದೆ. ಮಾನ್ಯ ನ್ಯಾಯಾಲಯದ ಅಧಿಕೃತ ಆದೇಶ ಸ್ವೀಕೃತಗೊಂಡ ನಂತರ ಸದರಿಯವರ ಸೇವಾ ಸಕ್ರಮಾತಿ ಕುರಿತು ಕ್ರಮವಹಿಸಿ ತದನಂತರ ಪಿಂಚಣಿ ಪ್ರಸ್ತಾವನೆಯನ್ನು ಇತ್ಯರ್ಥಗೊಳಿಸಲಾಗುವುದು.

**ಇಡಿ 211 ಯುಪಿಸಿ 2025 (ಇ)**

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು